ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 23-12-1993.

# *ಪವಿತ್ರತೆಯ ಧೃಡ ವ್ರತದ ಮೂಲಕ ವೃತ್ತಿಯ ಪರಿವರ್ತನೆ*

(पवित्रता के दृढ़ व्रत द्वारा वृत्ति का परिवर्तन)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಮತ್ತು ಆ ಸಂಬಂಧಗಳ ಕರ್ತವ್ಯವನ್ನು ಬ್ರಾಹ್ಮಣ ಜೀವನದಲ್ಲಿ ನಿಭಾಯಿಸಿದಾಗ ಆತ್ಮಿಕ ಸ್ಥಿತಿ ಸಹಜವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಪವಿತ್ರತೆಯ ಬುನಾದಿಯನ್ನು ಗಟ್ಟಿಯಾಗಿ ಮಾಡಿಕೊಳ್ಳುವ ಪ್ರೇರಣೆಯನ್ನು ಕೊಡುವ ಪರಮ ಪವಿತ್ರವಾದ ಬಾಪ್‌ದಾದಾ ಹೇಳಿದರು**

ಇಂದು ಸರ್ವ ಶ್ರೇಷ್ಠ ತಂದೆ ತನ್ನ ಸರ್ವ ಮಹಾನ್ ಮಕ್ಕಳನ್ನು ನೋಡುತ್ತಿದ್ದಾರೆ. ಮಹಾನ್ ಆತ್ಮರಂತೂ ಎಲ್ಲಾ ಮಕ್ಕಳೂ ಆಗಿದ್ದಾರೆ ಏಕೆಂದರೆ ಎಲ್ಲರಿಗಿಂತಲೂ ಮಹಾನ್ ರಾಗುವ ಮುಖ್ಯ ಆಧಾರವಾದ 'ಪವಿತ್ರತೆ' ಯನ್ನು ಧಾರಣೆ ಮಾಡಿಕೊಂಡಿದ್ದಾರೆ. ಪವಿತ್ರತೆಯ ವ್ರತವನ್ನು ಎಲ್ಲರೂ ಪ್ರತಿಜ್ಞೆಯ ರೂಪದಲ್ಲಿ ಧಾರಣೆ ಮಾಡಿಕೊಂಡಿದ್ದಾರೆ. ಯಾವುದೇ ಪ್ರಕಾರದ ದೃಡ ಸಂಕಲ್ಪವೆಂಬ ವ್ರತ ತೆಗೆದುಕೊಳ್ಳುವುದು ಅಂದರೆ ತನ್ನ ವೃತ್ತಿಯನ್ನು ಪರಿವರ್ತನೆ ಮಾಡಿಕೊಳ್ಳುವುದಾಗಿದೆ. ಧೃಡವಾದ ವ್ರತವು ವೃತ್ತಿಯನ್ನು ಬದಲಾಯಿಸಿ ಬಿಡುತ್ತದೆ ಆದ್ದರಿಂದ ಭಕ್ತಿಯಲ್ಲಿಯೂ ವ್ರತ ತೆಗೆದುಕೊಳ್ಳುವರು ಹಾಗೂ ವ್ರತವನ್ನಿಡುತ್ತಾರೆ. ವ್ರತ ತೆಗೆದುಕೊಳ್ಳುವುದು ಅರ್ಥಾತ್ ಮನಸ್ಸಿನಲ್ಲಿ ಸಂಕಲ್ಪ ಮಾಡುವುದು ಮತ್ತು ವ್ರತವನ್ನಿಡುವುದು ಅಂದರೆ ಸ್ಥೂಲರೀತಿಯಲ್ಲಿ ಪತ್ಯವನ್ನಿಡುವುದು. ಭಲೆ ಅದು ಆಹಾರ- ಪಾನೀಯಗಳ ಅಥವಾ

ಚಲನೆ-ವಲನೆಯ ಪತ್ಯವಾಗಿರಬಹುದು ಆದರೆ ಎರಡರ ಲಕ್ಷ್ಯವಾಗಿದೆ- ವ್ರತದ ಮೂಲಕ ವೃತ್ತಿಯನ್ನು ಬದಲಾಯಿಸಿಕೊಳ್ಳುವುದು. ತಾವೆಲ್ಲರೂ ಸಹ ಪವಿತ್ರತೆಯ ವ್ರತವನ್ನು ತೆಗೆದುಕೊಂಡಿದ್ದೀರಿ ಹಾಗೂ ವೃತ್ತಿ ಶ್ರೇಷ್ಠವಾಯಿತು. ಸರ್ವ ಆತ್ಮರ ಬಗ್ಗೆ ಎಂತಹ ವೃತ್ತಿ ಮಾಡಿಕೊಂಡಿದ್ದೀರಿ? ಆತ್ಮರು, ಸಹೋದರ-ಸಹೋದರಿ ಆಗಿದ್ದೇವೆ ಎಂಬ ಸಹೋದರತ್ವದ ವೃತ್ತಿಯಾಗಿದೆ. ಈ ವೃತ್ತಿಯಿಂದಲೇ ಬ್ರಾಹ್ಮಣ ಮಹಾನಾತ್ಮರಾದಿರಿ. ಈ ವ್ರತವನ್ನು ಎಲ್ಲರೂ ಪರಿಪಕ್ವ ಮಾಡಿಕೊಂಡಿದ್ದೀರಲ್ಲವೆ?

ಬ್ರಾಹ್ಮಣ ಜೀವನದ ಅರ್ಥವೇ ಆಗಿದೆ- ಪವಿತ್ರ ಆತ್ಮ. ಮತ್ತು ಈ ಪವಿತ್ರತೆಯು ಬ್ರಾಹ್ಮಣ ಜೀವನದ ಆಧಾರವಾಗಿದೆ. ಆಧಾರವು ಪರಿಪಕ್ವವಾಗಿದೆಯೇ ಅಥವಾ ಸಡಿಲವಾಗುತ್ತದೆಯೇ? ಈ ಆಧಾರವು ಸದಾ ಅಚಲ-ಅಡೋಲವಾಗಿರುವುದೇ ಬ್ರಾಹ್ಮಣ ಜೀವನದ ಸುಖವನ್ನು ಪ್ರಾಪ್ತಿ ಮಾಡಿಕೊಳ್ಳುವುದಾಗಿದೆ. ಕೆಲವೊಮ್ಮೆ ಮಕ್ಕಳು ತಂದೆಯೊಂದಿಗೆ ವಾರ್ತಾಲಾಪ ಮಾಡುತ್ತಾ, ತನ್ನ ಸತ್ಯವಾದ ಚಾರ್ಟ್ ಕೊಡುತ್ತಾರೆ. ಆಗೇನು ಹೇಳುತ್ತಾರೆ? ನಾವೆಷ್ಟು ಅತೀಂದ್ರಿಯ ಸುಖ, ಶಕ್ತಿಗಳ ಅನುಭವ ಮಾಡಬೇಕೆಂದು ಬಯಸುತ್ತೇವೆಯೋ ಅಷ್ಟು ಆಗುವುದಿಲ್ಲ ಅಥವಾ ಅನ್ಯ ಶಬ್ಧದಲ್ಲಿ ಹೇಳುತ್ತಾರೆ- ಸುಖ, ಶಕ್ತಿಯಿದೆ ಆದರೆ ಸದಾ ಇರುವುದಿಲ್ಲ. ಇದರ ಕಾರಣವೇನು? ಹೇಳುವಾಗ ಮಾಸ್ಟರ್ ಸರ್ವ ಶಕ್ತಿವಂತ ಎಂದು ಹೇಳುತ್ತಾರೆ, ಒಂದುವೇಳೆ ತಾವು ಮಾಸ್ಟರ್ ಸರ್ವಶಕ್ತಿವಂತರು ಆಗಿದ್ದೀರಾ ಎಂದು ಕೇಳಿದರೆ ಏನು ಹೇಳುವರು? ಇಲ್ಲವೆಂದಂತೂ ಹೇಳುವುದಿಲ್ಲ ಅಲ್ಲವೆ. ಹೌದು ಆಗಿದ್ದೇವೆ ಎಂದು ಹೇಳುತ್ತಾರೆ. ಮಾಸ್ಟರ್ ಸರ್ವಶಕ್ತಿವಂತ ಆಗಿದ್ದೀರೆಂದಮೇಲೆ ಶಕ್ತಿಗಳೆಲ್ಲವೂ ಎಲ್ಲಿಗೆ ಹೋಗುತ್ತವೆ? ಮತ್ತು ತಾವಿರುವುದೇ ಬ್ರಾಹ್ಮಣ ಜೀವನವುಳ್ಳವರು. ಹೆಸರಿನ ಬ್ರಾಹ್ಮಣರಲ್ಲ, ಜೀವನವೇ ಬ್ರಾಹ್ಮಣ ಜೀವನ. ಬ್ರಾಹ್ಮಣ ಜೀವನದಲ್ಲಿ ಸಂಪೂರ್ಣ ಸುಖ- ಶಾಂತಿಯ ಅನುಭೂತಿ ಆಗಲಿಲ್ಲ ಅಥವಾ ಬ್ರಾಹ್ಮಣರು ಸರ್ವ ಪ್ರಾಪ್ತಿಗಳಿಂದ ಸದಾ ಸಂಪನ್ನರಾಗದಿದ್ದರೆ ಮತ್ಯಾರು ಆಗುವರು? ಅನ್ಯ ಯಾರಾದರೂ ಆಗಲು ಸಾಧ್ಯವೇ? ಬ್ರಾಹ್ಮಣರೇ ಆಗಲು ಸಾಧ್ಯವಿದೆ ಅಲ್ಲವೇ. ತಾವೆಲ್ಲರೂ ತಮ್ಮ ಸಹಿ ಏನಂದು ಮಾಡುವಿರಿ? ಬಿ.ಕೆ.ಯ ಮುಂದೆ ಇಂತವರು ಎಂದು ಹೇಳುತ್ತೀರಲ್ಲವೆ? ಹೀಗೆಯೇ ಇರುತ್ತದೆಯಲ್ಲವೇ? ಬಿ.ಕೆ..ಯ ಅರ್ಥವೇನಾಗಿದೆ? ಬ್ರಾಹ್ಮಣ. ಅಂದಮೇಲೆ ಬ್ರಾಹ್ಮಣನ ಪರಿಭಾಷೆಯೇ ಇದಾಗಿದೆ.

'ಎಷ್ಟು' ಮಾಡಬೇಕೋ ಮತ್ತು 'ಅಷ್ಟು' ಆಗುತ್ತಿಲ್ಲ ಎಂಬ ಶಬ್ದವೇಕೆ ಬರುತ್ತದೆ? ಸುಖ-ಶಾಂತಿಯ ಜನನಿ ಪವಿತ್ರತೆ ಆಗಿದೆ ಎಂದು ಹೇಳುತ್ತೀರಿ. ಯಾವಾಗ ಅತೀಂದ್ರಿಯ ಸುಖ ಅಥವಾ ಮಧುರ ಶಾಂತಿಯ ಅನುಭವ ಕಡಿಮೆಯಿದೆಂದರೆ ಅದರ ಕಾರಣ- ಪವಿತ್ರತೆಯ ಆಧಾರವು ಬಲಹೀನವಾಗಿದೆ. ಮುಂಚೆಯೇ ತಿಳಿಸಲಾಗಿದೆ- ಪವಿತ್ರತೆ ಕೇವಲ ಬ್ರಹ್ಮಚರ್ಯದ ವ್ರತವಲ್ಲ. ಈ ವ್ರತವೂ ಮಹಾನ್ ಆಗಿದೆ ಏಕೆಂದರೆ ಈ ಬ್ರಹ್ಮಚರ್ಯದ ವ್ರತವನ್ನು ವರ್ತಮಾನದಲ್ಲಿ ಮಹಾನ್ ಆತ್ಮರೆಂದು ಕರೆಸಿಕೊಳ್ಳುವವರಿಗೂ ಕಷ್ಟವೇ ಅಲ್ಲ ಆದರೆ ಅಸಂಭವ ಎಂದು ತಿಳಿಯುತ್ತಾರೆ. ಆ ಅಸಂಭವವನ್ನು ತಾವು ಧೃಡ ಸಂಕಲ್ಪದ ಮೂಲಕ ಸಂಭವ ಮಾಡಿದ್ದೀರಿ ಮತ್ತು ಸಹಜವಾಗಿ ಪಾಲಿಸಿದ್ದೀರಿ ಆದ್ದರಿಂದ ಈ ವ್ರತವನು ಧಾರಣೆ ಮಾಡುವುದೇನೂ ಕಡಿಮೆ ಮಾತಲ್ಲ. ಬಾಪ್‌ದಾದಾರವರು ಈ ವ್ರತದ ಪಾಲನೆ ಮಾಡುವ ಆತ್ಮರಿಗೆ ಹೃದಯದ ಆಶೀರ್ವಾದಗಳ ಸಹಿತವಾಗಿ ಶುಭಾಷಯಗಳನ್ನು ಕೊಡುತ್ತಾರೆ. ಆದರೆ ಬಾಪ್‌ದಾದಾರವರು ಪ್ರತಿಯೊಂದು ಬ್ರಾಹ್ಮಣ ಮಗುವನ್ನು ಸಂಪೂರ್ಣ ಹಾಗೂ

ಸಂಪನ್ನರನ್ನಾಗಿ ನೋಡಲು ಬಯಸುತ್ತಾರೆ. ಹಾಗಾದರೆ ಹೇಗೆ ಜೀವನದಲ್ಲಿ ಈ ಮುಖ್ಯವಾದ ಮಾತನ್ನು ಧಾರಣೆ ಮಾಡಿಕೊಂಡಿದ್ದೀರಿ, ಅಸಂಭವವನ್ನು ಸಂಭವ ಸಹಜ ಮಾಡಿದಿರಿ ಅಂದಮೇಲೆ ಅನ್ಯ ಎಲ್ಲಾ ಪ್ರಕಾರದ ಪವಿತ್ರತೆಯನ್ನು ಧಾರಣೆ ಮಾಡುವುದೇನು ದೊಡ್ಡ ಮಾತು ಪವಿತ್ರತೆಯ ಪರಿಭಾಷೆ ಎಲ್ಲರಿಗೂ ಬಹಳಚೆನ್ನಾಗಿಯೇ ಗೊತ್ತಿದೆ. ಒಂದುವೇಳೆ ತಮ್ಮೆಲ್ಲರ ಬಳಿ "ಪವಿತ್ರತೆ ಎಂದರೆ " ಏನು" ಎಂದು ಕೇಳಲಿ, ಈ ಟಾಪಿಕ್ ಬಗ್ಗೆ ಭಾಷಣೆ ಮಾಡುತ್ತೀರೆಂದರೆ ಬಹಳ ಚೆನ್ನಾಗಿ ಮಾಡಬಹುದು ಅಲ್ಲವೇ? ಶಕ್ತಿಯ ಅನುಭೂತಿ ಕಡಿಮೆಯಾಗಿಬಿಡುತ್ತದೆ? ಯಾವಾಗ ಗೊತ್ತಿದೆ ಹಾಗೂ ಪಾಲನೆಯನ್ನೂ ಮಾಡುತ್ತೀರೆಂದಾಗ 'ಎಷ್ಟು', ಇರಬೇಕೋ 'ಅಷ್ಟು' ಇಲ್ಲ ಎಂಬ ಈ ಶಬ್ದಗಳೇಕೆ? ಸುಖ, ಶಾಂತಿ, ಶಕ್ತಿಯ ಅನುಭೂತಿ ಕಡಿಮೆಯಾಗುತ್ತಿದೆ ಅರ್ಥಾಥ್ ಯಾವ ವಿಧವಾದ ಪವಿತ್ರತೆ ಬಲಹೀನವಾಗಿದೆ? ಪವಿತ್ರತೆಯ ಯಾವುದೋ ಒಂದು ಸ್ಥಿತಿ ಸ್ಥಿರವಾಗಿ ಇಲ್ಲ, ಅಂದಾಗ ಯಾವ ರೂಪದ ಪವಿತ್ರತೆಯ ಏರುಪೇರಾಗಿದೆ ಎಂಬುದನ್ನು ಪರಿಶೀಲನೆ ಮಾಡಿಕೊಳ್ಳಿರಿ. ಬಾಪ್‌ದಾದಾರವರು ಪವಿತ್ರತೆಯ ಸರ್ವ ರೂಪಗಳನ್ನು ಸ್ಪಷ್ಟ ಮಾಡುತ್ತಿಲ್ಲ ಏಕೆಂದರೆ ತಾವು ತಿಳಿದಿದ್ದೀರಿ. ಕೆಲವೊಮ್ಮೆ ಕೇಳಿದ್ದೀರಿ. ತಿಳಿಸುತ್ತಾ ಇರುತ್ತೀರಿ. ತಮ್ಮೊಂದಿಗೆ ತಾವೇ ಮಾತನಾಡುತ್ತೀರಿ- ಹೌದು ಇದಿದೆ. ಇದಿದೆ..... ಮೆಜಾರಿಟಿಯಲ್ಲಿ ಫಲಿತಾಂಶವನ್ನು ನೋಡಿದಾಗ ಏನು ಕಂಡುಬಂದಿದೆ? ಜ್ಞಾನವು ಬಹಳಷ್ಟಿದೆ. ಯೋಗದ ವಿಧಿಯಲ್ಲಿಯೂ ವಿದಾತಾ ಆಗಿಬಿಟ್ಟಿದ್ದಾರೆ. ಧಾರಣೆಯ ವಿಷಯದಲ್ಲಿ ವರ್ಣಿಸುವುದರಲ್ಲಿಯೂ ಬಹಳ ಬುದ್ಧಿವಂತರಾಗಿದ್ದಾರೆ ಮತ್ತು ಸೇವೆಯಲ್ಲಿ ಒಬ್ಬರಿಗಿಂತ ಮತ್ತೊಬ್ಬರು ಮುಂದಿದ್ದಾರೆ. ಇನ್ನೇನಿದೆ? ಜ್ಞಾನದಲ್ಲಂತೂ ನಂಬರ್‌ವನ್, ಕೇವಲ ಒಂದು ಮಾತಿನಲ್ಲಿ ಹುಡುಗಾಟಿಕೆಯಲ್ಲಿರುತ್ತೀರಿ, ಅದೇನೆಂದರೆ- ಸ್ವಯಂನ್ನು ಸೆಕೆಂಡಿನಲ್ಲಿ ವ್ಯರ್ಥ ಚಿಂತನೆ ಮಾಡುವ, ನೋಡುವ, ಹೇಳುವ ಮತ್ತು ಮಾಡುವುದರಲ್ಲಿ ಬಿಂದುವನ್ನಿಟ್ಟು ಪರಿವರ್ತನೆ ಮಾಡುವುದು", ಇದೇ ಬಲಹೀನತೆಯು ಸುಖದ ಅನುಭೂತಿಯಲ್ಲಿ ಅಂತರ ತರುತ್ತದೆ, ಶಕ್ತಿ ಸ್ವರೂಪರಾಗುವುದರಲ್ಲಿ ಅಥವಾ ತಂದೆಯ ಸಮಾನರಾಗುವುದರಲ್ಲಿ ವಿಘ್ನ ಸ್ವರೂಪವಾಗುತ್ತದೆ ಎನ್ನುವುದು ಗೊತ್ತಿದ್ದರೂ ಏನಾಗುತ್ತದೆ? ತನ್ನನ್ನು ಪರಿವರ್ತನೆ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ, ಬಿಂದುವನ್ನಿಡಲು ಸಾಧ್ಯವಾಗುವುದಿಲ್ಲ. ಸರಿಯಾಗಿದ್ದೇನೆ ಎಂದು ತಿಳಿಯುತ್ತಾರೆ ಆದರೆ ಕಾಮ(,) ಇಟ್ಟುಬಿಡುತ್ತಾರೆ ಅಥವಾ ಅನ್ಯರನ್ನು ನೋಡುತ್ತಾ ಹೀಗೂ ಆಗುತ್ತದೆಯೇ! ಹೀಗಾಗಬೇಕು! ಎಂದು ಆಶ್ಚರ್ಯ ಸೂಚಕ (!) ಇಟ್ಟುಬಿಡುತ್ತೀರಿ. ಅಥವಾ ಪ್ರಶ್ನಾರ್ಥಕ ಚಿಹ್ನೆಯ ಕ್ಯೂ(ಸಾಲು) ಹಾಕಿಬಿಡುತ್ತೀರಿ. ಪ್ರಶ್ನೆಗಳ ಸಾಲನ್ನಿಡುತ್ತೀರಿ. ಪೂರ್ಣವಿರಾಮ ಎಂದರೆ ಬಿಂದು, ಅದನ್ನು ಯಾವಾಗ ತಾವು ಬಿಂದು ಸ್ವರೂಪ ಹಾಗೂ ತಂದೆ ಬಿಂದು ಸ್ವರೂಪ ಆತ್ಮನ ಎರಡೂ ಸ್ಮೃತಿಯಿರುತ್ತದೆಯೋ ಆಗಲೇ ಬಿಂದುವನ್ನಿಡಲು ಸಾಧ್ಯ. ಈ ಸ್ಮೃತಿಯು ಬಿಂದುವನ್ನಿಡಲು ಸಮರ್ಥರನ್ನಾಗಿ ಮಾಡಿಬಿಡುತ್ತದೆ. ಆ ಸಮಯದಲ್ಲಿ ನಾನು ಆತ್ಮಿಕ ಸ್ಥಿತಿಯಲ್ಲಿ ಸ್ಥಿತನಾಗಬೇಕು ಎಂದು ಏನಾದರೊಂದು ಚಿಂತನೆಯೂ ನಡೆಯುತ್ತಿರುತ್ತದೆ ಆದರೆ ಮಾಯೆಯು ತನ್ನ ಪರದೆಯ ಮೂಲಕ ಆತ್ಮನ ಬದಲಾಗಿ ವ್ಯಕ್ತಿ ಅಥವಾ ಮಾತುಗಳನ್ನು ತಮ್ಮ ಮುಂದೆ ತರುತ್ತದೆ. ಅದರಿಂದ ಆತ್ಮವು ಗುಪ್ತವಾಗಿಬಿಡುತ್ತದೆ ಮತ್ತು ಪದೇ-ಪದೇ ವ್ಯಕ್ತಿ ಮತ್ತು ಮಾತುಗಳು ಸ್ಪಷ್ಟವಾಗಿ ಮುಂದೆ ಬರುತ್ತದೆ. ಇದರ ಮೂಲ ಕಾರಣವೇನೆಂದರೆ- ಸ್ವಯಂನ ಮೇಲೆ ನಿಯಂತ್ರಣ ಮಾಡುವ ಶಕ್ತಿಯ ಕೊರತೆಯಿರುವುದು. ಅನ್ಯರನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳುವುದು ಬಹಳಷ್ಟು ಬರುತ್ತದೆ ಆದರೆ ಸ್ವಯಂನ ಮೇಲೆ ನಿಯಂತ್ರಣ ಅಂದರೆ ಪರಿವರ್ತನಾ ಶಕ್ತಿಯನ್ನು ಕಾರ್ಯದಲ್ಲಿ ಕಡಿಮೆ ಉಪಯೋಗ ಮಾಡುತ್ತೀರಿ.

ಬಾಪ್‌ದಾದಾರವರು ಕೆಲಕೆಲವು ಮಕ್ಕಳ ಶಬ್ಧಗಳನ್ನು ಕೇಳಿ ಮುಗುಳ್ನಗುತ್ತಾ ಇರುತ್ತಾರೆ. ಯಾವಾಗ - ಸ್ವಯಂನ ಪರಿವರ್ತನೆಯ ಸಮಯ ಬರುತ್ತದೆ ಅಥವಾ ಸಹನೆ ಮಾಡುವ ಸಮಯವಿರುತ್ತದೆ, ಸಮಾವೇಶ ಮಾಡಿಕೊಳ್ಳಬೇಕಾಗಿರುತ್ತದೆ ಆಗ ಏನು ಹೇಳುತ್ತೀರಿ? ಬಹಳಷ್ಟು ಮಕ್ಕಳು ಹೇಳುತ್ತಾರೆ- 'ನಾನೇ ಸಾಯಬೇಕಾ'. 'ನಾನೇ ಬದಲಾಗಬೇಕಾ', 'ನಾನೇ ಸಹನೆ ಮಾಡಬೇಕಾ', ಆದರೆ ಹೇಗೆ ಜನರು ಹೇಳುವರಲ್ಲವೆ- 'ಸತ್ತರು ಮತ್ತು ಸ್ವರ್ಗಕ್ಕೆ ಹೋದರು", ಅವರು ಸಾಯುವುದರಲ್ಲಂತು ಸ್ವರ್ಗದಲ್ಲಿ ಹೋಗುವುದಿಲ್ಲ ಆದರೆ ಸ್ವರ್ಗದ ಸ್ವರಾಜ್ಯ ಪಡೆಯುತ್ತಾರೆ ಅಂದಮೇಲೆ ಸಾಯುವುದಂತು ಒಳ್ಳೆಯದಲ್ಲವೇ? ಕಷ್ಟವೇನು? ನನ್ನ ತಪ್ಪೇನು ಇಲ್ಲ, ಅವರದೇ ತಪ್ಪು ಎಂದು ಆ ಸಮಯದಲ್ಲಿ ಕಷ್ಟವೆನಿಸುತ್ತದೆ. ಆದರೆ ತಪ್ಪಾಗಿರುವುದನ್ನು ಸರಿಪಡಿಸುಲು ಬರುವುದಿಲ್ಲ. ತಪ್ಪಾಗಿ ಇರುವವರನ್ನು ಬದಲಾಯಿಸಬೇಕಾ ಅಥವಾ ಸರಿಯಾಗಿರುವವರನ್ನು ಬದಲಾಯಿಸಬೇಕಾ? ಯಾರನ್ನು ಬದಲಾಯಿಸಬೇಕು? ಇಬ್ಬರೂ ಬದಲಾಗಬೇಕು. ಬದಲಾಗುವುದು ಅರ್ಥಾತ್ ಆಧ್ಯಾತ್ಮಿಕ ಭಾಷೆಯ ಪ್ರಕಾರ ಮುಂದಕ್ಕೆ ಹೋಗುವುದೆಂದು ಭಾವಿಸಿ ಆದರೆ ಬದಲಾಗುವುದು ಎಂದು ಭಾವಿಸಬೇಡಿ. ಬದಲಾಗುವುದು ಎಂದರೆ ಸರಿಯಾದ ರೂಪದಲ್ಲಿ ಬದಲಾಗಬೇಕು ಆದರೆ ತಪ್ಪಾದ ರೂಪದಲ್ಲಿ ಅಲ್ಲ. ಸ್ವಯಂ ಅನ್ನು ಬದಲಾಯಿಸಿಕೊಳ್ಳುವ ಶಕ್ತಿ ಇದೆಯೇ? ಅಥವಾ ಯಾವುದೋ ಒಂದು ಸಮಯದಲ್ಲಿ ಹೇಗೊ ಪರಿವರ್ತನೆಯಾಗಿ ಬಿಡುತ್ತೇವೆ ಎಂದು ತಿಳಿಯುತ್ತಿದ್ದೀರಾ.

ಪವಿತ್ರತೆಯ ಅರ್ಥವೇ ಆಗಿದೆ- ಸದಾ ಪ್ರತೀ ಸಮಯದಲ್ಲಿ ಸಂಕಲ್ಪ, ಮಾತು, ಕರ್ಮ, ಸಂಬಂಧ- ಸಂಪರ್ಕದಲ್ಲಿ ಮೂರು ಬಿಂದುಗಳ ಮಹತ್ವವನ್ನು ಧಾರಣೆ ಮಾಡುವುದು. ಅಂತಹ ಯಾವುದೇ ಪರಿಸ್ಥಿತಿ ಬಂದರೆ ಸೆಕೆಂಡ್ ನಲ್ಲಿ ಬಿಂದು ಇಡುವುದರಲ್ಲಿ ಮೊದಲು ತಮ್ಮನ್ನು ಆಫರ್ ಮಾಡಿರಿ- "ನಾನು ಮಾಡುತ್ತೇನೆ" ಈ ರೀತಿ ಆಫರ್ ಮಾಡುವವರಿಗೆ ಮೂರು ಪ್ರಕಾರದ ಆಶೀರ್ವಾದವು ಸಿಗುತ್ತದೆ- 1.ತಮಗೆ ತಮ್ಮಿಂದಲೂ ಆಶೀರ್ವಾದ ಸಿಗುತ್ತದೆ, ಖುಷಿ ಸಿಗುತ್ತದೆ. 2.ತಂದೆಯ ಮೂಲಕ, 3.ಬ್ರಾಹ್ಮಣ ಪರಿವಾರದ ಶ್ರೇಷ್ಠ ಆತ್ಮರೆಲ್ಲರ ಮೂಲಕ ಆಶೀರ್ವಾದವು ಸಿಗುತ್ತದೆ. ಹಾಗಾದರೆ ಇದು ಸಾಯುವುದಾಯಿತೇ ಅಥವಾ ಪಡೆಯುವುದೇ, ಏನೆಂದು ಕೇಳುವಿರಿ? ಇದಕ್ಕಾಗಿ ಬಿಂದುವನ್ನು ಇಡುವ ಪುರುಷಾರ್ಥವನ್ನು ಹಾಗೂ ನಿಯಂತ್ರಣಾ ಶಕ್ತಿಯ ಮೂಲಕ ಪರಿವರ್ತನಾ ಶಕ್ತಿಯನ್ನು ತೀವ್ರ ಗತಿಯಿಂದ ವೃದ್ಧಿ ಮಾಡಿಕೊಳ್ಳಿರಿ. ಹುಡುಗಾಟಿಕೆಯಲ್ಲಿ ಬರಬಾರದು- ಇದಂತೂ ಆಗುತ್ತಿರುತ್ತದೆ. ಇದಂತೂ ನಡೆಯುತ್ತಿರುತ್ತದೆ... ಇದು ಹುಡುಗಾಟಿಕೆಯ ಸಂಕಲ್ಪವಾಗಿದೆ. ಇದನ್ನು ಪರಿವರ್ತನೆ ಮಾಡಿಕೊಂಡು ಅಲರ್ಟ್ ಆಗಿರಿ. ಒಳ್ಳೆಯದು-

**ನಾಲ್ಕೂ ಕಡೆಯ ಮಹಾನ್ ಆತ್ಮರಿಗೆ, ಸರ್ವ ಶ್ರೇಷ್ಠ ಪವಿತ್ರತೆಯ ವ್ರತವನ್ನು ಧಾರಣೆ ಮಾಡುವಂತಹ ಆತ್ಮರಿಗೆ, ಸದಾ ತಮಗಾಗಿ ಸೆಕೆಂಡಿನಲ್ಲಿ ಬಿಂದುವನ್ನಿಡುವಂತಹ ಶ್ರೇಷ್ಠ ಪರಿವರ್ತಕ ಆತ್ಮರಿಗೆ, ಸದಾ ತನ್ನನ್ನು ಶ್ರೇಷ್ಠ ಕಾರ್ಯದಲ್ಲಿ ನಿಮಿತ್ತ ಮಾಡುವುದಕ್ಕಾಗಿ ಆಫರ್ ಕೊಡುವಂತಹ ಆತ್ಮರಿಗೆ, ಸದಾ ಮೂರು ಬಿಂದುವಿನ ಮಹತ್ವವನ್ನು ಪ್ರತ್ಯಕ್ಷದಲ್ಲಿ ಧಾರಣೆ ಮಾಡಿಕೊಂಡು ತೋರಿಸುವಂತಹ ತಂದೆಯ ಸಮಾನ ಆತ್ಮರಿಗೆ ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.**

**ದಾದಿಯವರೊಂದಿಗೆ ವಾರ್ತಾಲಾಪ:**

ತಮ್ಮೆಲ್ಲರನ್ನು ನೋಡುತ್ತಾ ಖುಷಿಯಾಗುತ್ತದೆ. ಏಕೆ ಖುಷಿಯಾಗುತ್ತದೆ? (ಬಾಪ್‌ದಾದಾರವರು ಎಲ್ಲರೊಂದಿಗೆ ಕೇಳುತ್ತಿದ್ದಾರೆ) ದಾದಿಯವರನ್ನು ನೋಡಿ ಖುಷಿ ಆಗುತ್ತದೆಯಲ್ಲವೆ? ಏಕೆ ಖುಷಿಯಾಗುತ್ತೀರಿ? ಏಕೆಂದರೆ ತಮ್ಮ ಪ್ರಕಂಪನ ಅಥವಾ ಕರ್ಮದ ಮೂಲಕ ಖುಷಿ ಕೊಡುತ್ತೀರಿ ಆದ್ದರಿಂದ ಖುಷಿಯಾಗುತ್ತೀರಿ. ಯಾವುದೇ ಸಮಯದಲ್ಲಿ ಇಂತಹ ಶ್ರೇಷ್ಠ ಅತ್ಮರೊಂದಿಗೆ ಭೇಟಿಯಾದರೆ ಖುಷಿಯ ಅನುಭವ ಮಾಡುತ್ತೀರಲ್ಲವೆ. (ನಿಮಿತ್ತ ಶಿಕ್ಷಕಿಯರೊಂದಿಗೆ) ಅನುಸರಣೆಯನ್ನೂ ಮಾಡುತ್ತೀರಲ್ಲವೆ. ಹಲವರು ಯೋಚಿಸುತ್ತಾರೆ- ತಂದೆಯಂತು ತಂದೆ, ಸಮಾನರಾಗಲು ಹೇಗೆ ಸಾಧ್ಯ? ಆದರೆ ಯಾರು ನಿಮಿತ್ತ ಆತ್ಮರಾಗಿದ್ದಾರೆಯೋ ಅವರಂತು ತಮ್ಮ ಜೊತೆಗಾರರಾಗಿದ್ದಾರಲ್ಲವೆ? ಅಂದಾಗ ಯಾವಾಗ ಅವರು ಆಗಬಹುದು ಅಂದಮೇಲೆ ತಾವಾಗಲು ಸಾಧ್ಯವಿಲ್ಲವೇ? ಹಾಗಾದರೆ ಎಲ್ಲರ ಲಕ್ಷ್ಯವಂತು ಸಂಪೂರ್ಣ-ಸಂಪನ್ನರಾಗುವುದೇ ಆಗಿದೆ. ಒಂದುವೇಳೆ ತಾವು 16 ಕಲೆಯವರಾಗುತ್ತೀರಾ ಅಥವಾ 14 ಕಲೆಯವರಾಗಬೇಕಾ ಎಂದು ಕೈಯೆತ್ತಿಸಿದರೆ ಯಾವುದಕ್ಕೆ ಕೈಯೆತ್ತುವಿರಿ? 16ಕಲೆ, ಅಂದಮೇಲೆ 16 ಕಲೆಯವರ ಅರ್ಥವೇನಾಗಿದೆ? ಸಂಪೂರ್ಣರಲ್ಲವೆ. ಯಾವಾಗ ಲಕ್ಷ್ಯವೇ ಇದಾಗಿದೆ ಅಂದಮೇಲೆ ಆಗಲೇಬೇಕು. ಕಷ್ಟವೇನೂ ಇಲ್ಲ, ಆಗಲೇಬೇಕು. ಚಿಕ್ಕ-ಚಿಕ್ಕ ಮಾತುಗಳಲ್ಲಿ ಗಾಬರಿಯಾಗಬಾರದು. ಮೂರ್ತಿ ಆಗುತ್ತಿದ್ದೀರೆಂದಾಗ ಸ್ವಲ್ಪ ಸುತ್ತಿಗೆ ಪೆಟ್ಟು ಬೀಳುತ್ತದೆಯಲ್ಲವೆ, ಇಲ್ಲದಿದ್ದರೆ ಮೂರ್ತಿಯಾಗುವುದು ಹೇಗೆ! ಯಾರೆಷ್ಟು ವೃದ್ಧಿಯಾಗುತ್ತಾರೆಯೋ ಅವರು ಬಿರುಗಾಳಿಗಳೂ ಬಹಳ ಹೆಚ್ಚಾಗಿ ಪಾರು ಮಾಡಬೇಕಾಗುತ್ತದೆ ಆದರೆ ಅವರಿಗೆ ಆ ಬಿರುಗಾಳಿಯೆನಿಸುವುದಿಲ್ಲ, ಬಳುವಳಿ ಎಂಬ ಅನುಭವವಾಗುತ್ತದೆ. ಈ ಬಿರುಗಾಳಿಯೂ ಅನುಭವಿಯಾಗುವ ಗಿಫ್ಟ್ ಆಗಿಬಿಡುತ್ತದೆ. ಹಾಗಾದರೆ ಬಳುವಳಿ ಆಯಿತಲ್ಲವೆ. ಹಾಗಾದರೆ ಗಿಫ್ಟ್ ತೆಗೆದುಕೊಳ್ಳುವುದು ಇಷ್ಟವಾಗುತ್ತದೆಯೇ ಅಥವಾ ಕಷ್ಟವೆನಿಸುತ್ತದೆಯೇ? ಇದೂ ಸಹ ತೆಗೆದುಕೊಳ್ಳುವುದಾಗಿದೆ. ಕೊಡುವುರಲ್ಲ, ಕೊಡುವುದು ಕಷ್ಟವಾಗುತ್ತದೆ. ತೆಗೆದುಕೊಳ್ಳುವುದು ಸಹಜವಾಗುತ್ತದೆ.

ಇಂತಹ ಪಾತ್ರವು ನನ್ನದೇ ಆಗಿದೆ, ಎಲ್ಲಾ ವಿಘ್ನಗಳ ಅನುಭವವು ನನ್ನ ಬಳಿಯೇ ಬರಬೇಕಾ ಎಂದು ಯೋಚಿಸಬಾರದು. ಅದನ್ನು ಬಾ ಎಂದು ಸ್ವಾಗತಿಸಿರಿ, ಇದು ಗಿಫ್ಟ್ ಆಗಿದೆ. ಅತ್ಯಂತ ಹೆಚ್ಚು ಗಿಫ್ಟ್ ಗಳಿವೆ ಇದರಲ್ಲೇನಿದೆ? ಹೆಚ್ಚು ಅಕ್ಯುರೇಟ್ ಮೂರ್ತಿಯಾಗುವುದು ಅರ್ಥಾತ್ ಸುತ್ತಿಗೆ ಪೆಟ್ಟು ಬೀಳುವುದು, ಸುತ್ತಿಗೆಯ ಏಟಿನಿಂದಲೇ ಸರಿಪಡಿಸುತ್ತಾರೆ. ತಾವುಗಳು ಅನುಭವಿಯಂತು ಆಗಿದ್ದೀರಿ, ಹೊಸದೇನು ಇಲ್ಲ, ಆಟವೆನಿಸುತ್ತದೆ. ನೋಡುತ್ತಾ ಇರುತ್ತೀರಿ ಹಾಗೂ ಮುಗುಳ್ನಗುತ್ತಾ ಇರುತ್ತೀರಿ. ಆಶೀರ್ವಾದವನ್ನು ತೆಗೆದುಕೊಳ್ಳುತ್ತಾ ಇರುತ್ತೀರಿ. ಟೀಚರ್ಸ್ ಶಕ್ತಿಶಾಲಿಗಳೇ ಅಥವಾ ಕಲವೊಮ್ಮೆಗೆ ಗಾಬರಿಯಾಗುತ್ತೀರಾ? ಈ ರೀತಿಯಾಗುತ್ತದೆಯೇ ಎನ್ನುವುದನ್ನೂ ಯೋಚಿಸಿರಲಿಲ್ಲ. ಮೊದಲೇ ಗೊತ್ತಿದ್ದರೆ ಯೋಚಿಸುತ್ತಿದ್ದೆ.... ಡಬಲ್ ವಿದೇಶಿಗಳು ಹೀಗೆ ಹೇಳುತ್ತೀರಾ- ಬ್ರಾಹ್ಮಣರಾಗುವುದರಲ್ಲಿಯೂ ಹೀಗೆ ಆಗುತ್ತದೆಯೇ? ಎನ್ನುವುದನ್ನು ಯೋಚಿಸಿರಲಿಲ್ಲ. ಯೋಚಿಸಿ- ಚಿಂತನೆ ಮಾಡಿ ಬಂದಿದ್ದೀರಾ ಅಥವಾ ಈಗ ಯೋಚಿಸಬೇಕಾಗಿದೆಯೇ? ಒಳ್ಳೆಯದು-

ಯಾರು ಹೇಗಾದರೂ ಇರಲಿ ಆದರೆ ಬಾಪ್‌ದಾದಾರವರು ಸದ್ಗುಣವನ್ನೇ ನೋಡುತ್ತಾರೆ ಆದ್ದರಿಂದ ಬಾಪ್ ದಾದಾರವರು ಎಲ್ಲರನ್ನೂ ಒಳ್ಳೆಯವರೆಂದೇ ಹೇಳುತ್ತಾರೆ ಕೆಟ್ಟವರೆಂದು ಹೇಳುವುದಿಲ್ಲ. ಭಲೆ 9 ಅವಗುಣವಿರಬಹುದು ಮತ್ತು

ಒಂದು ಸದ್ಗುಣವಿದ್ದರೂ ತಂದೆಯು ಏನು ಹೇಳುವರು? ಒಳ್ಳೆಯವರೆಂದು ಹೇಳುವರೇ ಅಥವಾ ಇವರಂತು ಬಹಳ ಕೆಟ್ಟವರು, ಇವರಂತು ಬಹಳ ಬಲಹೀನರಾಗಿದ್ದಾರೆ ಎಂದು ಹೇಳುತ್ತಾರೆಯೇ? ಒಳ್ಳೆಯದು- ಇದಂತು ದೊಡ್ಡ ಗ್ರೂಪ್ ಆಗಿಬಿಟ್ಟಿದೆ. (21 ದೇಶಗಳ ಜನರು ಬಂದಿದ್ದಾರೆ) ಚೆನ್ನಾಗಿದೆ, ಹೌಸ್‌ಫುಲ್ ಆದಾಗಲೇ ಅನ್ಯರೂ ಆಗುವರು. ಒಂದುವೇಳೆ ಫುಲ್ ಆಗದಿದ್ದರೆ ಅನ್ಯರು ಆಗುವ ಅವಕಾಶವೇ ಇರುವುದಿಲ್ಲ. ಅವಶ್ಯಕತೆಯೇ ಸಾಧನವನು ಸನ್ಮುಖದಲ್ಲಿ ತರುತ್ತದೆ.

**ಅವ್ಯಕ್ತ ಬಾಪ್‌ದಾದಾರವರ ವಾರ್ತಾಲಾಪ:**

**ಪ್ರತೀ ಹೆಜ್ಜೆಯಲ್ಲಿ ಪದಮಗಳ ಸಂಪಾದನೆಯನ್ನು ಜಮಾ ಮಾಡುವ ಯುಗ – ಸಂಗಮಯುಗ.**

ತಮ್ಮನ್ನು ಪದಮಾಪದಮ್ ಭಾಗ್ಯಶಾಲಿಯೆಂದು ತಿಳಿಯುತ್ತೀರಾ? ಪ್ರತೀ ಹೆಜ್ಜೆಯಲ್ಲಿ ಪದಮಗಳ ಸಂಪಾದನೆಯು ಜಮಾ ಆಗುತ್ತಿದೆಯೇ? ಹಾಗಾದರೆ ಎಷ್ಟು ಪದಮಗಳಷ್ಟು ಜಮಾ ಮಾಡಿಕೊಂಡಿದ್ದೀರಿ? ಎಣಿಕೆಯಿಲ್ಲದಷ್ಟು ಇದೆಯೇ? ಏಕೆಂದರೆ ಗೊತ್ತಿದೆ- ಈಗ ಜಮಾ ಮಾಡಿಕೊಳ್ಳುವ ಸಮಯವಾಗಿದೆ. ಸತ್ಯಯುಗದಲ್ಲಿ ಜಮಾ ಆಗುವುದಿಲ್ಲ, ಅಲ್ಲಿಯೂ ಕರ್ಮವಾಗುತ್ತದೆ ಆದರೆ ಅಕರ್ಮವಾಗುತ್ತದೆ. ಏಕೆಂದರೆ ಅಲ್ಲಿನ ಕರ್ಮದ ಸಂಬಂಧವು ಸಹ ಇಲ್ಲಿಯ ಕರ್ಮಗಳ ಫಲದ ಲೆಕ್ಕದಲ್ಲಿದೆ. ಅಂದಮೇಲೆ ಇಲ್ಲಿ ಮಾಡುವ ಸಮಯವಾಗಿದೆ ಮತ್ತು ಅಲ್ಲಿ ಅನುಭವಿಸುವ ಸಮಯ ಆಗಿರುತ್ತದೆ. ಹಾಗಾದರೆ

ಇಷ್ಟು ಗಮನವಿರುತ್ತದೆಯೇ? ಎಷ್ಟು ಜನ್ಮಗಳಿಗಾಗಿ ಜಮಾ ಮಾಡಿಕೊಳ್ಳಬೇಕು? (84) ಜಮಾ ಮಾಡುವುದರಲ್ಲಿ ಆಗುತ್ತದೆಯಲ್ಲವೇ? ಪರಿಶ್ರಮ ಎನಿಸುವುದಿಲ್ಲವೇ? ಏಕೆ ಪರಿಶ್ರಮವೆನಿಸುವುದಿಲ್ಲ? ಏಕೆಂದರೆ ಪ್ರತ್ಯಕ್ಷಫಲವೂ ಸಿಗುತ್ತದೆ. ಪ್ರತ್ಯಕ್ಷಫಲ ಸಿಗುತ್ತಿದೆಯೇ ಅಥವಾ ಭವಿಷ್ಯದ ಆಧಾರದ ಮೇಲೆ ನಡೆಯುತ್ತಿದ್ದೀರಾ? ಭವಿಷ್ಯಕ್ಕಿಂತಲೂ ಪ್ರತ್ಯಕ್ಷಫಲವು ಅತ್ಯಂತ ಶ್ರೇಷ್ಠವಾದುದು. ಸದಾಕಾಲವೂ ಶ್ರೇಷ್ಠ ಕರ್ಮ ಹಾಗೂ ಶ್ರೇಷ್ಠ ಪ್ರತ್ಯಕ್ಷಫಲ ಸಿಗುವಂತಹ ಸಾಧನವಾಗಿದೆ- ಸದಾ ಇದನ್ನು ನೆನಪಿಟ್ಟುಕೊಳ್ಳಿರಿ- ಈಗಿಲ್ಲದಿದ್ದರೆ ಮತ್ತೆಂದಿಗೂ ಇಲ್ಲ. ಡಬಲ್ ವಿದೇಶಿ ಎಂದು ಹೆಸರೇನಿದೆ, ಅದರನುಸಾರ

ಡಬಲ್‌ನ ಟೈಟಲ್ ಬಹಳ ಚೆನ್ನಾಗಿದೆ. ಹಾಗಾದರೆ ಎಲ್ಲದರಲ್ಲಿಯೂ ಡಬಲ್ ಖುಷಿಯಲ್ಲಿ, ನಶೆಯಲ್ಲಿ, ಪುರುಷಾರ್ಥದಲ್ಲಿ. ಎಲ್ಲದರಲ್ಲಿಯೂ ಡಬಲ್ ಸೇವೆಯಲ್ಲಿಯೂ ಡಬಲ್. ಹಾಗೆಯೇ ಇರುವುದೂ ಸಹ ಡಬಲ್ ಅಂದರೆ ಕಂಬೈಂಡ್, ಒಂಟಿಯಾಗಿರುವುದಿಲ್ಲ. ಎಂದಾದರೂ ಡಬಲ್ ಆಗುವ ಸಂಕಲ್ಪವಂತು ಬರುವುದಿಲ್ಲವೆ!!? ಸಂಗ ಬೇಕು ಅಥವಾ ಸಂಗಾತಿ ಬೇಕು ಎಂಬ ಸಂಕಲ್ಪವು ಬರುವುದಿಲ್ಲವೇ? ಬೇಕೆಂದರೆ ಹೇಳಿರಿ, ಅಲ್ಲಿಗೆ ಹೋದನಂತರ ಸಂಗಾತಿ ಬೇಕು ಎನ್ನಬಾರದು. ಸಂಗಾತಿ ಎಷ್ಟಾದರೂ ಮಾಡಿಕೊಳ್ಳರಿ ಆದರೆ ಇಂತಹ ಸಂಗಾತಿಯಂತು ಸಿಗಲು ಸಾಧ್ಯವಿಲ್ಲ. ಎಷ್ಟೇ ಒಳ್ಳೆಯ ಸಂಗಾತಿಯಇರಬಹುದು ಆದರೆ ಎಲ್ಲರೂ ತೆಗೆದುಕೊಳ್ಳುವವರು, ಕೊಡುವವರಲ್ಲ. ಈ ವಿಶ್ವದಲ್ಲಿ ಯಾರಾದರೂ ಇಂತಹ ಸಂಗಾತಿ ಇದ್ದಾರೆಯೇ? ಅಮೇರಿಕಾ, ಆಸ್ಟ್ರೇಲಿಯಾ, ಆಫ್ರಿಕಾ ಮುಂತಾದವು. ಎಲ್ಲಾದರೂ ಹುಡುಕಿಕೊಂಡು ಬನ್ನಿರಿ. ಸಿಗುತ್ತಾರೆಯೇ! ಏಕೆಂದರೆ ಮನುಷ್ಯಾತ್ಮರು ಎಷ್ಟಾದರೂ ಕೊಡುವವರಾಗಿರಬಹುದು ಆದರೂ ಕೊಡುತ್ತಾ-ಕೊಡುತ್ತಾ ಅವಶ್ಯವಾಗಿ ತೆಗೆದುಕೊಳ್ಳುವರು. ಅಂದಮೇಲೆ ಯಾವಾಗ ಸಂಗಾತಿಯಾಗಿ ದಾತನೇ ಸಿಕ್ಕಿದ್ದಾರೆಂದರೆ ಏನು ಮಾಡಬೇಕು? ಎಲ್ಲಿಯೇ ಹೋಗಿ, ಪುನಃ ಬರಲೇಬೇಕಾಗುತ್ತದೆ. ಇವರೆಲ್ಲರೂ ಹೋಗುವವರಲ್ಲ. ಯಾರೂ ಸಹ

ಬಲಹೀನರಲ್ಲ ಅಲ್ಲವೇ? ಫೋಟೊ ತೆಗೆದುಕೊಳ್ಳುತ್ತಿದ್ದಾರೆ. ಮತ್ತೆ ತಮಗೆ ಫೋಟೊ ಕಳುಹಿಸುತ್ತೇವೆ- ತಾವು ಹೀಗೆ ಹೇಳಿದ್ದೀರಿ ಎಂದು. ಇದಾಗಲೇಬಾರದು ಎಂದು ಹೇಳರಿ. ಬಾಪ್‌ದಾದಾರವರೂ ಸಹ ತಮ್ಮೆಲ್ಲರಿಂದ ಒಂಟಿಯಾಗಿರಲು ಸಾಧ್ಯವಿಲ್ಲ.

ರಿವೈಸ್ ಕೋರ್ಸ್ 23-12-1993.

***ಪವಿತ್ರತೆಯ ದೃಢ ವ್ರತದ ಮೂಲಕ ವೃತ್ತಿಯ ಪರಿವರ್ತನೆ.***

ಸುಖ, ಶಾಂತಿಯ ಜನನಿ ಪವಿತ್ರತೆಯಾಗಿದೆ ಎಂದು ಹೇಳುತ್ತೀರಿ. ಯಾವಾಗ ಅತೀಂದ್ರಿಯ ಸುಖ ಅಥವಾ ಮಧುರ ಶಾಂತಿಯ ಅನುಭವ ಕಡಿಮೆ ಇದೆ ಅಂದರೆ ಪವಿತ್ರತೆಯ ಆಧಾರವು ಬಲಹೀನವಾಗಿದೆ ಎಂದರ್ಥ. ಮುಂಚೆಯೇ ತಿಳಿಸಲಾಗಿದೆ ಪವಿತ್ರತೆ ಅರ್ಥಾತ್ ಕೇವಲ ಬ್ರಹ್ಮಚರ್ಯದ ವ್ರತವಲ್ಲ, ಈ ವ್ರತವು ಮಹಾನ್ ಆಗಿದೆ ಏಕೆಂದರೆ ಈ ಬ್ರಹ್ಮಚರ್ಯದ ವ್ರತವನ್ನು ವರ್ತಮಾನದಲ್ಲಿ ಮಹಾನಾತ್ಮರೆಂದು ಕರೆಯಿಸಿಕೊಳ್ಳುವವರು ಕಷ್ಟವೇ ಅಲ್ಲ ಅಸಂಭವವೆಂದು ತಿಳಿಯುತ್ತಿದ್ದಾರೆ. ನೀವು ಅಸಂಭವವನ್ನು ಸಂಭವ ಮಾಡಿ ತೋರಿಸುವ ಮಕ್ಕಳಾಗಿದ್ದೀರಿ ಆದರೆ ಬಾಪ್‌ದಾದಾರವರು ಪ್ರತಿಯೊಂದು ಬ್ರಾಹ್ಮಣ ಮಗುವನ್ನು ಸಂಪೂರ್ಣ ಹಾಗೂ ಸಂಪನ್ನರನ್ನಾಗಿ ನೋಡಲು ಬಯಸುತ್ತಿದ್ದಾರೆ. ಎಂದು ತಿಳಿಸುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಶಕ್ತಿ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಪವಿತ್ರತೆಯ ದೃಢ ಸಂಕಲ್ಪವೆಂಬ ವ್ರತದಿಂದ ವೃತ್ತಿಯನ್ನು ಪರಿವರ್ತನೆ ಮಾಡಿಕೊಂಡಿದ್ದೇನೆ.

2. ನಾನು ಸರ್ವಾತ್ಮರ ಪ್ರತಿ ಸಹೋದರ, ಸಹೋದರಿ ಎಂಬ ಸೋದರತ್ವದ ವೃತ್ತಿಯನ್ನು ಇಟ್ಟಿರುವ ಬ್ರಾಹ್ಮಣ ಮಹಾನಾತ್ಮ.

3. ನನ್ನ ಬ್ರಾಹ್ಮಣ ಜೀವನದ ಪವಿತ್ರತೆಯ ಆಧಾರವು ಸದಾ ಅಚಲವಾಗಿ ಸ್ಥಿರವಾಗಿದೆ.

4. ನಾನು ಹೆಸರಿಗಾಗಿ ಅಲ್ಲದೆ ಸತ್ಯವಾದ ಬ್ರಾಹ್ಮಣ ಜೀವನವನ್ನು ಹೊಂದಿದ್ದೇನೆ.

5. ನಾನು ಬ್ರಾಹ್ಮಣ ಜೀವನದಲ್ಲಿ ಸಂಪೂರ್ಣ ಸುಖ, ಶಾಂತಿ & ಸರ್ವಪ್ರಾಪ್ತಿಗಳೊಂದಿಗೆ ಸಂಪನ್ನವಾಗಿರುವ ಮಾಸ್ಟರ್ ಸರ್ವಶಕ್ತಿವಂತನು.

6. ನನ್ನೊಳಗೆ ಅತೀಂದ್ರಿಯ ಸುಖ ಹಾಗೂ ಶಾಂತಿಯ ಅನುಭೂತಿಯ ಏರುಪೇರು ಆದಾಗ ಯಾವ ರೂಪದ ಪವಿತ್ರತೆಯ ಬಲಹೀನತೆ ಇದೆ ಎಂದು ಪರಿಶೀಲಿಸಿಕೊಂಡು ಪರಿವರ್ತನೆ ಮಾಡಿಕೊಂಡಿದ್ದೇನೆ.

7. ನಾನು ವ್ಯರ್ಥ ಚಿಂತನೆ ಮಾಡುವ, ನೋಡುವ ಹೇಳುವ ಮತ್ತು ಮಾಡುವುದರಲ್ಲಿ ಸೆಕೆಂಡ್ ನಲ್ಲಿ ಬಿಂದುವನ್ನಿಟ್ಟು ಸುಖ, ಶಕ್ತಿ ಸ್ವರೂಪವಾಗಿ ತಂದೆಯ ಸಮಾನವಾಗಿ ತಯಾರಾಗಿದ್ದೇನೆ.

8. ನಾನು ಆಶ್ಚರ್ಯಾರ್ಥಕ ಮತ್ತು ಪ್ರಶ್ನಾರ್ಥಕವನ್ನು ಬಿಟ್ಟು ಬಿಂದು ಸ್ವರೂಪವಾದ ತಂದೆ ಹಾಗೂ ಬಿಂದು ಸ್ವರೂಪವಾದ ಆತ್ಮನ ಸ್ಮೃತಿಯಲ್ಲಿರುವ ಸಮರ್ಥ ಸ್ವರೂಪ.

9. ನಾನು ನಿಯಂತ್ರಣಾ ಶಕ್ತಿಯಿಂದ ಸ್ವಯಂನ್ನು ನಿಯಂತ್ರಣೆ ಮಾಡಿಕೊಂಡಿದ್ದೇನೆ, ಇತರರನ್ನಲ್ಲ.

10. ನನ್ನ ಸ್ವಯಂನ ಪರಿವರ್ತನೆಯ, ಸಹನೆ ಮಾಡುವ ಅಥವಾ ಸಮಾವೇಶ ಮಾಡಿಕೊಳ್ಳುವ ಸಮಯ ಬಂದಾಗ ನಾನೇ ಸಾಯಬೇಕಾ? ನಾನೇ ಬದಲಾಗಬೇಕಾ? ನಾನೇ ಸಹಿಸಬೇಕಾ? ಎಂದು ಯೋಚಿಸದೆ ಸ್ವರ್ಗದ ಶ್ರೇಷ್ಠ ಪದವಿ ಮತ್ತು ಸ್ವರ್ಗದ ಸ್ವರಾಜ್ಯ ಪಡೆಯುತ್ತಿದ್ದೇನೆ ಎಂಬ ಆನಂದದಲ್ಲಿ ಇದ್ದೇನೆ.

11. ನಾನು ಪ್ರತೀ ಸಮಯದಲ್ಲಿ ಸಂಕಲ್ಪ, ಮಾತು, ಕರ್ಮ, ಸಂಬಂಧ ಸಂಪರ್ಕದಲ್ಲಿ ಬರುವ ಎಂತಹದೇ ಪರಿಸ್ಥಿತಿಯಲ್ಲಿ ಸ್ವಯಂನ್ನು ಆಫರ್ ಮಾಡಿ ಬಿಂದುವಿಟ್ಟು ಸ್ವಯಂನಿಂದ ಆಶೀರ್ವಾದ ಹಾಗೂ ಖುಷಿ, ತಂದೆಯ ಮೂಲಕ ಆಶೀರ್ವಾದ, ಬ್ರಾಹ್ಮಣ ಪರಿವಾರದ ಶ್ರೇಷ್ಠ ಆತ್ಮರ ಮೂಲಕ ಆಶೀರ್ವಾದವನ್ನು ಪಡೆಯುತ್ತಿದ್ದೇನೆ.

12. ಹೀಗಂತೂ ಆಗುತ್ತಲೇ ಇರುತ್ತದೆ, ಇದಂತೂ ನಡೆಯುತ್ತಲೇ ಇರುತ್ತದೆ ಎಂಬ ಹುಡುಗಾಟಕೆಯ ಸಂಕಲ್ಪವನ್ನು ಪರಿವರ್ತನೆ ಮಾಡಿ ಅಲರ್ಟ್ ಆಗಿದ್ದು ನಿಯಂತ್ರಣಾ ಶಕ್ತಿ ಮತ್ತು ಪರಿವರ್ತನಾ ಶಕ್ತಿಯನ್ನು ತೀವ್ರ ಗತಿಯಿಂದ ವೃದ್ಧಿ ಮಾಡಿಕೊಂಡಿದ್ದೇನೆ.